ಅ) ಬನ್ನಾರಿ ಅಮ್ಮನ ಸಕ್ಕರೆ ಕಾರ್ಖಾನೆಯ ಸಹಾಯಕ ಪ್ರಧಾನ ನಿರ್ವಾಹಕರಿಂದ ರೋಲರ್ ಶಾಫ್ಟ್‌ಗಳು ಮುರಿದು ಹೋಗಿರುವ ಬಗ್ಗೆ ಅಧ್ಯಯನ ನಡೆಸಲಾಗಿದೆ. ಕಂಪನಿಯು ಹಳೆಯ ರೋಲರ್‌ಗಳನ್ನು ಸಂಪೂರ್ಣವಾಗಿ ಪರೀಕ್ಷಿಸುವ ಸಲುವಾಗಿ ಎರಡನೇ ಬಾರಿಗೆ ಅಲ್ಟ್ರಾಸೋನಿಕ್ ಪರೀಕ್ಷೆಯನ್ನು ಮಾಡಿರುತ್ತದೆ. ಹಾಗೂ ಬದಲಿ ಜೋಡಣೆಗಾಗಿ ಬದಲಿ ರೋಲರ್‌ಗಳನ್ನು ಖರೀದಿಸಲಾಗಿದೆ.

ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ

1001 (1213) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಈವರೆವಿಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಇ) ಮಂಡ್ಯದಲ್ಲಿನ ಕ್ರೀಡಾ ಹಾಸ್ಟೆಲ್‌ನ್ನು ಪುನರಾರಂಭಿಸಲು ಕ್ರಮವನ್ನು ಕೈಗೊಳ್ಳಲಾಗಿದೆಯೇ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಇದು ಜಿಲ್ಲಾ ಪಂಚಾಯತ್ ಆಯವ್ಯಯದ ಯೋಜನೆಯಲ್ಲಿದ್ದು, ಕ್ರೀಡಾ ವಸತಿ ನಿಲಯವನ್ನು ಪುನರಾರಂಭಿಸುವ ಬಗ್ಗೆ ಜಿಲ್ಲಾ ಪಂಚಾಯತಿಯು ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಅರಣ್ಯ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳು

1003 (1470) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಅರಣ್ಯ ಇಲಾಖೆಯಲಿ ರಾಜ್ಯಾದ್ಯಂತ ಎಷ್ಟು ಹುದ್ದೆಗಳು ಖಾಲಿ ಇವೆ/ ಡಿವಿಜನ್‌ವಾರು ಹುದ್ದೆಗಳ ವಿವರ ನೀಡುವುದು

ಆ) ಈ ಹುದ್ದೆಗಳು ಎಷ್ಟು ಸಮಯದಿಂದ ಖಾಲಿ ಇವೆ;

ಇ) ಈ ರೀತಿ ಹುದ್ದೆಗಳು ಖಾಲಿ ಇರುವುದರಿಂದ ಅರಣ್ಯ ರಕ್ಷಣೆ ಮತ್ತು ಅರಣ್ಯ ಬೆಳೆಸುವಲ್ಲಿ ಏನು ತೊಂದರೆಯಾಗಿದೆ.